ವಿರುದ್ಧ ನೋಟೀಸ್‌ಗಳನ್ನು ಜಾರಿ ಮಾಡುತ್ತಿದೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳ ಮುಖ್ಯಸ್ಥರೊಡಗೂಡಿ ಸಹಯೋಗದೊಡನೆ ಸಾರ್ವಜನಿಕರಲ್ಲಿ ಈ ಕಾಯ್ದೆಯ ಕುರಿತು ಅರಿವನ್ನು ಮೂಡಿಸುವ ಕಾರ್ಯಕ್ರಮವನ್ನು ಏರ್ಪಡಿಸಿದೆ ಹಾಗೂ ಸರ್ಕಾರೇತರ ಸಂಘ ಸಂಸ್ಥೆಗಳ ಸಹಕಾರದೊಡನೆ ಮುನಿಸಿಪಲ್ ಸದಸ್ಯರಿಗೂ ಸಹ ಈ ಕಾಯ್ದೆಯ ಕುರಿತು ಅರಿವನ್ನು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿರುತ್ತಾರೆ.

ಅರಣ್ಯ ಪ್ರದೇಶದ ಒತ್ತುವರಿ

749(1340) ಶ್ರೀ ಅಮರೇಶ್:(ಮುಳಬಾಗಿಲು) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಳಬಾಗಿಲು ತಾಲ್ಲೂಕಿನಲ್ಲಿ ಒಟ್ಟು ಅರಣ್ಯ ಪ್ರದೇಶದ ವಿಸ್ತೀರ್ಣ ಎಷ್ಟು? (ವಿವರ ಒದಗಿಸುವುದು)

ಆ) ಅರಣ್ಯ ಪ್ರದೇಶದ ಭೂಮಿಯನ್ನು ಎಷ್ಟು ಮಂದಿ ರೈತರು ಒತ್ತುವರಿ ಮಾಡಿಕೊಂಡಿದ್ದಾರೆ ಹಾಗೂ ಒತ್ತುವರಿ ಮಾಡಿಕೊಂಡಿರುವ ರೈತರುಗಳಿಗೆ ಸರ್ಕಾರವು ವಿಧಿಸಿರುವ ದಂಡವೇನು?

ಇ) ಹಲವಾರು ವರ್ಷಗಳಿಂದ ಒತ್ತುವರಿ ಭೂಮಿಯಲ್ಲಿಯೇ ಬಡ ರೈತ ಕುಟುಂಬಗಳು ಜೀವನೋಪಾಯವನ್ನು ನಡೆಸುತ್ತಿರುವ ಇವರುಗಳಿಗೆ ಪರ್ಯಾಯ ವ್ಯವಸ್ಥೆ ಮಾಡಲಾಗುವುದೇ?

ಶ್ರೀ ಬಿ ಎಸ್ ಯಡಿಯೂರಪ್ಪ(ಮುಖ್ಯಮಂತ್ರಿಯವರು)

ಅ) ಮುಳಬಾಗಿಲು ತಾಲ್ಲೂಕಿನಲ್ಲಿರುವ ಅರಣ್ಯ ಪ್ರದೇಶದ ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ	ಅರಣ್ಯದ ಹೆಸರು	ವಿಸ್ತೀರ್ಣ (ಎಕರೆಗಳಲ್ಲಿ)
1	ಗೋಕುಂಟೆ ಆರ್.ಎಫ್	3267.35
2	ಕಾಶೀಮರ ಆರ್.ಎಫ್	351.00
3	ಅಗರ ಆರ್.ಎಫ್ (part)	5052.33

	ಒಟ್ಟು	8671.33
ಸೆಕ್ಷನ್–04 ರಲ್ಲಿ ಘೋಷಿತವಾದ ಅರಣ್ಯ ಪ್ರದೇಶ		
1	ಮಿಟ್ಟಹಳ್ಳಿ	77.14
2	ದುಗ್ಗಸಂದ್ರ	249.36
3	ದೊಡ್ಡಬಂಡಹಳ್ಳಿ	96.33
4	ಮಲ್ಲೆಕುಪ್ಪ	45.07
	ಒಟ್ಟು	469.10

ಆ) ಮುಳಬಾಗಿಲು ತಾಲ್ಲೂಕಿನಲ್ಲಿ ದಿನಾಂಕ: 27.04.1978ರ ಪೂರ್ವದಲ್ಲಿ 5 ಕುಟುಂಬಗಳು 3.10 ಹೆ. ವಿಸ್ತೀರ್ಣ ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿರುತ್ತಾರೆ. ಈ ಐದು ಕುಟುಂಬಗಳು ದಿನಾಂಕ:27.04.1978ರ ಪೂರ್ವದಲ್ಲಿ ಒತ್ತುವರಿ ಮಾಡಿಕೊಂಡಿರುವುದರಿಂದ ಸಕ್ರಮಗೊಳಿಸಲು ಅರ್ಹತೆ ಹೊಂದಿರುತ್ತಾರೆ.

ದಿನಾಂಕಃ27.04.1978ರ ನಂತರ 3 ಒತ್ತುವರಿ ಪ್ರಕರಣಗಳಿದ್ದು ಅವುಗಳನ್ನು ಈಗಾಗಲೇ ಕರ್ನಾಟಕ ಅರಣ್ಯ ಅಧಿನಿಯಮ 1963 ಸಕ್ಷನ್ 64ಎ ರನ್ವಯ ತೆರವುಗೊಳಿಸಲಾಗಿದೆ.

ಇ) ದಿನಾಂಕಃ27.04.1978 ರ ಪೂರ್ವದ ಅರಣ್ಯ ಒತ್ತುವರಿಯ 5 ಪ್ರಕರಣಗಳನ್ನು ಸರ್ಕಾರದ ಮಾರ್ಗ ಸೂಚಿಗಳನ್ವಯ ಸಕ್ರಮಗೊಳಿಸಲು ಕೋಲಾರ ಜಿಲ್ಲಾಧಿಕಾರಿಯವರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಮುಳಬಾಗಿಲು ತಾಲ್ಲೂಕು ತಹಶೀಲ್ದಾರ್ ರವರು ಬರೆದಿರುವ ಪತ್ರ ಸಂಖ್ಯೆ: ಮಿಸಲೇನಿಯಸ್–87/2007–08 ದಿನಾಂಕ: 21.11.2007 ರಲ್ಲಿ ಈ ಮೇಲೆ ತಿಳಿಸಿರುವ 5 ಒತ್ತುವರಿದಾರರು ಹಾಲಿ ವಾಸವಾಗಿರುವುದಿಲ್ಲ ಮತ್ತು ಸದರಿ ಜಮೀನನ್ನು ಉಳಿಮೆ ಮಾಡುತ್ತಿಲ್ಲ ಎಂದು ವರದಿ ಮಾಡಿರುತ್ತಾರೆ. ಆದುದರಿಂದ ಒತ್ತುವರಿ ಜಮೀನನ್ನು ಸಕ್ರಮಗೊಳಿಸಲು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.